# ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 789
ಸದಸ್ಯರ ಹೆಸರು : ಶ್ರೀ ಸುನೀಲಗೌಡ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ : 23.02.2023
ಉತ್ತರಿಸುವ ಸಚಿವರು : ಜಲಸಂಪನ್ಮೂಲ ಸಚಿವರು

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ವಿಜಯಪುರ ಜಿಲ್ಲೆಯ ಆಲಮಟ್ಟಿ ಪುನರ್ವಸತಿ ಕೇಂದ್ರದಡಿಯಲ್ಲಿ ಬರುವ ದೇವರಗೆಣ್ಣೂರು ಹಾಗೂ ಸುತ್ತಮುತ್ತಲಿನ ಗ್ರಾಮಗಳಾದ ಕಣಬೂರ, ಶರಬೂರ, ಸುತಗುಂಡಿ, ಲಿಂಗದಲ್ಲಿ, ಜೈನಾಪುರ, ಮಂಗಳೂರ ಹಾಗೂ ಮುಂತಾದ ಗ್ರಾಮಗಳಲ್ಲಿ ನಿವೇಶನ ಹಂಚಿಕೆಯಲ್ಲಿ ವ್ಯಾಪಕ ಭ್ರಷ್ಟಾಚಾರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ವಿಜಯಪುರ ಜಿಲ್ಲೆಯ ಆಲಮಟ್ಟಿ ಪುನರ್ವಸತಿ ಕೇಂದ್ರದಡಿಯಲ್ಲಿ ಬರುವ ದೇವರಗೆಣ್ಣೂರು ಗ್ರಾಮದ ಪುನರ್‌ವಸತಿ ಕೇಂದ್ರದಲ್ಲಿನ ನಿವೇಶನ ಬದಲಾವಣೆ ಹಾಗೂ ಒಂದೇ ನಿವೇಶನ ಇಬ್ಬರಿಗೆ ಹಂಚಿಕೆಯಾಗಿರುವ ಕುರಿತು ದೂರುಗಳು ಬಂದಿದ್ದು, ಸದರಿ ದೂರುಗಳ ಕುರಿತು ವಿಚಾರಣೆಯು ಪ್ರಗತಿಯಲ್ಲಿರುತ್ತದೆ.<br><br>ಇನ್ನುಳಿದ ಗ್ರಾಮಗಳಾದ ಕಣಬೂರ, ಶಿರಬೂರ, ಸುತಗುಂಡಿ, ಲಿಂಗದಳ್ಳಿ, ಜೈನಾಪೂರ, ಮಂಗಳೂರು ಗ್ರಾಮಗಳಲ್ಲಿ ನಿವೇಶನ ಹಂಚಿಕೆ ಕುರಿತು ಯಾವುದೇ ದೂರು ಅರ್ಜಿಗಳು ಸ್ವೀಕೃತವಾಗಿರುವುದಿಲ್ಲ.<br><br>ಕೋಲ್ಹಾರ ಪುನರ್‌ವಸತಿ ಕೇಂದ್ರದ ಅಕ್ರಮ ನಿವೇಶನ ಹಂಚಿಕೆ ಕುರಿತು ತನಿಖೆ ಮಾಡಲಾಗಿದೆ.<br><br>ಚಿಮ್ಮಲಗಿ ಪುನರ್‌ವಸತಿ ಕೇಂದ್ರಗಳಲ್ಲಿ ಅಕ್ರಮ ಜರುಗಿರುವ ಕುರಿತು ದೂರುಗಳ ಬಂದ ಹಿನ್ನೆಲೆಯಲ್ಲಿ ವಿಶೇಷ ಜಿಲ್ಲಾಧಿಕಾರಿಗಳು ಹಾಗೂ ಸಮೂಹ ವ್ಯವಸ್ಥಾಪಕರು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಹಾಗೂ ಭೂಸ್ವಾಧೀನ, ಕೃಷ್ಣಾ ಮೇಲ್ದಂಡೆ ಯೋಜನೆ, ಬಾಗಲಕೋಟೆ ಇವರ ಅಧ್ಯಕ್ಷತೆಯಲ್ಲಿ ತನಿಖಾ ತಂಡವನ್ನು ರಚಿಸಿದ್ದು, ಸದರಿ ಕೆಲಸವು ಪ್ರಗತಿಯಲ್ಲಿದೆ. |
| ಆ) | ಮೂಲ ಸಾಮಾಜಿಕ ಹಾಗೂ ಆರ್ಥಿಕ ಸಮೀಕ್ಷೆ (SES) ಯಲ್ಲಿ ಇರುವಂತಹ ಫಲಾನುಭವಿಗಳ ಹೆಸರುಗಳನ್ನು ಅಕ್ರಮವಾಗಿ ತಿದ್ದುಪಡಿ ಮಾಡಿ ಬೇರೆಯವರ ಹೆಸರಿಗೆ ನಿಯಮಬಾಹಿರವಾಗಿ ವರ್ಗಾವಣೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಈ ಕುರಿತು ಕೈಗೊಂಡ ಕ್ರಮಗಳೇನು; | ಕೃಷ್ಣಾ ಮೇಲ್ದಂಡೆ ಯೋಜನೆಯ ಪುನರ್ ವಸತಿ ಮತ್ತು ಪುನರ್ ನಿರ್ಮಾಣಕ್ಕಾಗಿ ಸರ್ಕಾರದ ಆದೇಶ ಸಂಖ್ಯೆ:ಆರ್‌ಡಿ 21 ಆರ್.ಇ.ಹೆಚ್ 94 ದಿನಾಂಕ:15.05.1995 ರನ್ವಯ ಅರ್ಹ ಸಂತ್ರಸ್ಥರ ಫಲಾನುಭವಿಗಳಿಗೆ ಪುನರ್ವಸತಿ ಮತ್ತು ಪುನರ್ ನಿರ್ಮಾಣದ ನಿಯಮಾನುಸಾರ ನಿವೇಶನಗಳನ್ನು ಹಂಚಿಕೆ ಮಾಡಲಾಗುತ್ತಿದೆ.<br><br>ಕೊಲ್ಹಾರ ಪುನರ್ ವಸತಿ ಕೇಂದ್ರದಲ್ಲಿ ಸಾರ್ವಜನಿಕ ಉದ್ದೇಶಗಳಿಗಾಗಿ ಮತ್ತು ಉದ್ಯಾನವನ ನಿರ್ಮಿಸುವ ಸಲುವಾಗಿ ಖುಲ್ಲಾ ಜಾಗೆಗಳನ್ನು ಮೀಸಲಿಡಲಾಗಿದ್ದು, ಸಾರ್ವಜನಿಕ ಉದ್ದೇಶಕ್ಕೆ ಮೀಸಲಿಟ್ಟ ಜಾಗೆಗಳ ಉದ್ದೇಶ ಬದಲಾಯಿಸಿ ನಿವೇಶನಗಳನ್ನಾಗಿ ಪರಿವರ್ತಿಸಿ, ಕಾನೂನು ಬಾಹಿರವಾಗಿ ಹಕ್ಕು ಪತ್ರ ವಿತರಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ, ವಿಶೇಷ ಜಿಲ್ಲಾಧಿಕಾರಿಗಳು ಹಾಗೂ ಸಮೂಹ ವ್ಯವಸ್ಥಾಪಕರು, ಭೂಸ್ವಾಧೀನ, ಪುನರ್ ವಸತಿ ಮತ್ತು |
| ಇ) | ಅಕ್ರಮ ಅನಧಿಕೃತ ಸೇರ್ಪಡೆ ಅವ್ಯವಹಾರಗಳ ಮೂಲಕ ಪಡೆದ ನಿವೇಶನಗಳ ಹಂಚಿಕೆಯನ್ನು | |

| | | |
|---|---|---|
| | ರದ್ದುಪಡಿಸಲು ಮತ್ತು ತಪ್ಪು ದಾಖಲೆ ಹಾಗೂ ಮಾಹಿತಿ ಸಲ್ಲಿಸಿ ಅಕ್ರಮ ನಿವೇಶನ ಮತ್ತು ಸಂತ್ರಸ್ಥರ ಸೌಲಭ್ಯ ಪಡೆದವರು ಹಾಗೂ ಅಕ್ರಮಕ್ಕೆ ಸಹಕಾರ ನೀಡಿದ ಅಧಿಕಾರಿಗಳ ಸಿಬ್ಬಂದಿಗಳ ಮೇಲೆ ಯಾವ ಕಾನೂನು ಕ್ರಮಗಳನ್ನು ಕೈಗೊಳ್ಳಲಾಗಿದೆ; ಈ ಕುರಿತು ಸರ್ಕಾರದ ಸ್ಪಷ್ಟ ನಿಲುವೇನು? | ಪುನರ್ ನಿರ್ಮಾಣ. ಕೃ.ಮೇ.ಯೋ. ಬಾಗಲಕೋಟೆ ಇವರ ಅಧ್ಯಕ್ಷತೆಯಲ್ಲಿ ರಚಿಸಿದ ತಂಡವು ಪುನರ್ವಸತಿ ಅಧಿಕಾರಿಗಳು, ಕೃಷ್ಣಾ ಮೇಲ್ದಂಡೆ ಯೋಜನೆ, ಆಲಮಟ್ಟಿ ಕಛೇರಿಯ ವ್ಯಾಪ್ತಿಯಲ್ಲಿನ ಕೋಲ್ಹಾರ ಪುನರ್ ವಸತಿ ಕೇಂದ್ರದ ಅಕ್ರಮ ನಿವೇಶನ ಹಂಚಿಕೆ ಕುರಿತು ಪರಿಶೀಲಿಸಿ, ವರದಿಯನ್ನು ಸಲ್ಲಿಸಿರುತ್ತದೆ.<br><br>ಆಯುಕ್ತರು, ಭೂಸ್ವಾಧೀನ, ಪುನರ್ ವಸತಿ ಮತ್ತು ಪುನರ್ ನಿರ್ಮಾಣ. ಕೃ.ಮೇ.ಯೋ. ಬಾಗಲಕೋಟೆ ಇವರು ಸದರಿ ತನಿಖಾ ತಂಡದ ವರದಿಯ ಅನ್ವಯ ಅಕ್ರಮ ಅನಧಿಕೃತ ಸೇರ್ಪಡೆ ಅವ್ಯವಹಾರಗಳ ಮೂಲಕ ಪಡೆದ ನಿವೇಶನಗಳ ಹಂಚಿಕೆಯನ್ನು ರದ್ದುಪಡಿಸಲು ಮತ್ತು ತಪ್ಪು ದಾಖಲೆ ಮತ್ತು ಮಾಹಿತಿ ಸಲ್ಲಿಸಿ ಅಕ್ರಮ ನಿವೇಶನ ಮತ್ತು ಸಂತ್ರಸ್ಥರ ಸೌಲಭ್ಯ ಪಡೆದವರು ಮತ್ತು ಅಕ್ರಮಕ್ಕೆ ಸಹಕಾರ ನೀಡಿದ ಅಧಿಕಾರಿಗಳ / ಸಿಬ್ಬಂದಿಗಳ ಮೇಲೆ ಭೂಸ್ವಾಧೀನ ಕಾಯ್ದೆ ಕಲಂ (84) ಮತ್ತು (85) ರನ್ವಯ ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ಪುನರ್ವಸತಿ ಅಧಿಕಾರಿಗಳು, ಆಲಮಟ್ಟಿ ಇವರಿಗೆ ದಿನಾಂಕ:31.12.2021 ರ ಪತ್ರದಲ್ಲಿ ನಿರ್ದೇಶನ ನೀಡಿರುತ್ತಾರೆ.<br><br>ಸದರಿ ವರದಿಯ ಅನ್ವಯ ನಿವೇಶನ ಹಂಚಿಕೆಯಲ್ಲಿ ಕಂಡುಬಂದ ಅಕ್ರಮಗಳ ಕುರಿತು ಸುಳ್ಳು ಮಾಹಿತಿ ನೀಡಿ ಸೌಲಭ್ಯ ಪಡೆದ 1117 ಸಂತ್ರಸ್ಥರು ಮತ್ತು ಸದರಿ ಅಕ್ರಮಗಳಲ್ಲಿ ಭಾಗಿಯಾದ ಅಧಿಕಾರಿ / ಸಿಬ್ಬಂದಿ ಮತ್ತು ಮಧ್ಯವರ್ತಿಗಳ ವಿರುದ್ಧ ಕೋಲ್ಹಾರ ಪೋಲೀಸ್ ಠಾಣೆಯಲ್ಲಿ ಎಫ್.ಐ.ಆರ್. ಸಂಖ್ಯೆ:04/2022 ರ ಪ್ರಕಾರ ದಾಖಲಿಸಲಾಗಿರುತ್ತದೆ.<br><br>ಪ್ರಸ್ತುತ, ಸದರಿ ಪ್ರಕರಣವು ಜೆ.ಎಂ.ಎಫ್.ಸಿ. ಬಸವನಬಾಗೇವಾಡಿ ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿರುತ್ತದೆ. |

ಸಂಖ್ಯೆ:ಜಸಂಇ 19 ಡಬ್ಲ್ಯೂಬಿಎಂ 2023

(ಗೋವಿಂದ ಎಂ.ಕಾರಜೋಳ)

ಜಲ ಸಂಪನ್ಮೂಲ ಸಚಿವರು